**ಅ. ದಾ. ಸಂ. ಃ 147/2014**
**ಡಿ.ಡಬ್ಲ್ಯೂ ಃ 01**

**ದಿನಾಂಕ ಃ 21-03-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ವಾದಿಯ ಪರ ಶ್ರೀ. ಎ.ಎಸ್.ಎಸ್ , ವಕೀಲರಿಂದ ಃ-**

ವಾದಿಯು ನನಗೆ ಕಾನೂನುಬದ್ಧ ನೋಟೀಸ್ ನ್ನು ನೀಡುವ ಮೊದಲು ನಾನು ಸ್ವಾಧೀನವನ್ನು ಬಿಟ್ಟು ಕೊಡಿ ಎಂದು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿಲ್ಲ. ಸಾಕ್ಷಿ ಮುಂದುವರೆದು ಹಿರಿಯರನ್ನು ಕರೆಸಿ ಮಾತನಾಡಿದ್ದೇವೆ ಎಂದು ನುಡಿಯುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ನಾನು ನೋಟಿಸ್ ಮತ್ತು ದಾವೆಯನ್ನು ಹಾಕಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ.

ನಿಪಿ-1 ನ್ನು ನೋಂದಣಿ ಮಾಡುವ ಉದ್ದೇಶದಿಂದ ನಾನು ಸ್ವಾಧೀನವನ್ನು ಮಾನವೀಯತೆಯ ದೃಷ್ಟಿ ಯಿಂದ ಬಿಟ್ಟು ಕೊಟ್ಟಿದ್ದೇನೆ ಎಂದು ನಿಪಿ-10 ರ ಪ್ರಕಾರ ಸುಳ್ಳು ನೋಟಿಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ಪ್ರಕಾರ ನಾನು ಪ್ರತ್ಯುತ್ತರ ನೋಟೀಸ್ ನ್ನು ಕಳುಹಿಸಿದ ನಂತರ ವಾದಿಯ ವಿರುದ್ದ ಸ್ವಾಧೀನವನ್ನು ಕೋರಿ ದಾವೆಯನ್ನು ಹಾಕಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ. ನಾನು ನಿಪಿ-1 ಬರೆದುಕೊಟ್ಟಿರುವ ಕಾರಣ ವಾದಿಯ ವಿರುದ್ದ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

ದಿ.29-09-2011 ರಂದು ನನ್ನ ತಂದೆ ತಾಯಿ ನಿಪಿ-1 ನ್ನು ವಾದಿಗೆ ಬರೆದುಕೊಟ್ಟಿರುತ್ತಾರೆ ಮತ್ತು ನಾನು ಮಾನವೀಯತೆ ದೃಷ್ಟಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಬಿಟ್ಟುಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಆಧಾರದ ಮೇಲೆ ವಾದಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈಗ ನನಗೆ ನಿಪಿ-1 ನ್ನು ತೋರಿಸಿದ್ದು, ಅದರಲ್ಲಿ ನನ್ನ ತಂದೆ ತಾಯಿಯ ಸಹಿ ಇದೆ ಎಂದರೆ ಸರಿಯಲ್ಲ. ಈಗ ನನಗೆ ಪ್ರತಿವಾದಿಗಳು ಹಾಕಿರುವ ವಕಾಲತ್ತನ್ನು ತೋರಿಸಿದ್ದು, ಅದರಲ್ಲಿ ನನ್ನ ತಾಯಿಯ

ಸಹಿ ಇದೆ. ಪ್ರತಿವಾದ ಪತ್ರದಲ್ಲೂ ಸಹ ನನ್ನ ತಾಯಿಯ ಸಹಿ ಇದೆ. ನಿಪಿ-1 ರಲ್ಲಿ ಇರುವ ಸಹಿಯನ್ನು ಮತ್ತು ವಕಾಲತ್ತು ಮತ್ತು ಪ್ರತಿವಾದಪತ್ರದಲ್ಲಿ ಇರುವ ನನ್ನ ತಾಯಿಯ ಸಹಿಯನ್ನು ಹೋಲಿಕೆ ಮಾಡಿ ಪರೀಕ್ಷೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ.

ನಾನು ಈ ಹಿಂದೆ ನನ್ನ ಪಾಟೀ ಸವಾಲಿನಲ್ಲಿ ಹೇಳಿರುವ ಹಾಗೆ, ನನ್ನ ತಂದೆಯ ಸಹಿಯನ್ನು ನಿಪಿ-1 ರಲ್ಲಿ ಇರುವ ಸಹಿಯಂತೆ ಹೋಲಿಕೆ ಮಾಡಿ ಪರೀಕ್ಷೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ. ನಿಪಿ-10 ರಲ್ಲಿ ಇರುವ ನನ್ನ ತಾಯಿಯ ಸಹಿಯನ್ನು ನಿಪಿ-1 ರಲ್ಲಿ ಇರುವ ಸಹಿಯ ಜೊತೆ ಹೋಲಿಕೆ ಮಾಡಿ ಪರೀಕ್ಷೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ.

ವಾದಿಯು ನನ್ನ ತಂದೆ ತಾಯಿಯಿಂದ ಕಾನೂನುಬದ್ಧವಾಗಿ ನಿಪಿ-1 ನ್ನು ಬರೆಸಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಮತ್ತು ನಿಪಿ-1 ನ್ನು ನೋಂದಣಿ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ-1 ಸುಳ್ಳಿನಿಂದ ಕೂಡಿದೆ ಎಂದು ನುಡಿಯುತ್ತಾರೆ.

ನಿಪಿ-1 ನ್ನು ಬರೆದುಕೊಡುವಾಗ ತೆಗೆದುಕೊಂಡಿರುವ 1 ಲಕ್ಷ ರೂಪಾಯಿ ಮುಂಗಡ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಮತ್ತು ದಾವಾ ಆಸ್ತಿಯ ಬೆಲೆ ಹೆಚ್ಚಾಗಿರುವುದರಿಂದ ದಾವಾ ಆಸ್ತಿಯನ್ನು ಹಿಂಪಡೆಯುವ ಉದ್ದೇಶದಿಂದ ನಿಪಿ-1 ನ್ನು ಬರೆದುಕೊಟ್ಟಿಲ್ಲ ಎಂದು ಹೇಳುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಬರೆದುಕೊಟ್ಟಿಲ್ಲ ಎಂದರೆ ಸ್ವಾಧೀನವನ್ನು ವಾದಿಗೆ ಬಿಟ್ಟು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ಕ್ಕೆ ಪಕ್ಷಗಾರರಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಸಹಿ ಇಲ್ಲ. ನಿಪಿ-1 ಕ್ಕೆ ನಾನು ಪಕ್ಷಗಾರರಲ್ಲದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತಾಯಿ ವಾದಿಯ ಜೊತೆ ಮಾಡಿರುವ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡ ನಂತರ, ನಾನು ಮತ್ತು ಪ್ರತಿವಾದಿ-2 ರಿಂದ 3 ರವರು ದಾವಾ ಆಸ್ತಿಯನ್ನು ಹಿಂಪಡೆಯುವ ಸಲುವಾಗಿ ಮತ್ತು ಅದರಿಂದ ಪ್ರೇರೇಪಿತಗೊಂಡು ಸುಳ್ಳು ಪ್ರಮಾಣಪತ್ರ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**